# ಹಸೀನಾ

ಸಂವೇದನೆ ಎಂಬ ಪದದ ಅರ್ಥವೇನು? ತನ್ನ ಸುತ್ತಲಿನ ಆಗುಹೋಗುಗಳಿಗೆ ಸ್ಪಂದಿಸುವುದೇ? ತುಡಿಯುವುದೇ? ಹಾಗಾದರೆ ತೀರ ಒರಟ ಮನುಷ್ಯನನ್ನು ಕಂಡು ಸಂವೇದನೆಯಿಲ್ಲದವನು (ಹಾಗೇ ಬೆಂಗಳೂರಿಗರು ಸಂವೇದನಾಹೀನರು) ಎನ್ನುತ್ತಾರಲ್ಲ, ಅವನೂ ತನ್ನದೇ(ಒರಟಾಗಿಯಾದರೂ) ರೀತಿಯಲ್ಲಿ ಸ್ಪಂದಿಸುತ್ತಿರುತ್ತಾನೆ ತಾನೇ (ಹಾಗಾಗಿ ಆತನೂ ಸಂವೇದನಾಶೀಲನೇ ತಾನೇ)? ಹಾಗಾದರೆ ಸಂವೇದನೆಯೆಂದರೆ ನಮ್ಮ ತುಡಿತದ ಸಾರ್ಥಕ (ಸಮಾಜವೂ ಒಪ್ಪತಕ್ಕಂತಹ) ಅಭಿವ್ಯಕ್ತಿಯೇ? ಹಾಗಾದರೆ ಅಭಿವ್ಯಕ್ತಿಯೆಂದರೇನು?

ಇದೆಲ್ಲದರಿಂದ ನಿಮಗೆ ಗೊಂದಲವುಂಟಾದರೆ, ಆ ಗೊಂದಲಕ್ಕೆ ಉತ್ತಮ ಪರಿಹಾರ ಗಿರೀಶ್ ಕಾಸರವಳ್ಳಿಯವರ 'ಹಸೀನಾ' ಚಿತ್ರ. ಕನ್ನಡದ ಉತ್ತಮೋತ್ತಮ ನಿರ್ದೇಶಕರೆಲ್ಲ ಸಿನೆಮಾಗಳ ಲೆಕ್ಕಾಚಾರಕ್ಕೆ ಬಿದ್ದು ಒಮ್ಮೆ ಉತ್ತಮ ಚಿತ್ರ; ನಂತರ ಜೊಳ್ಳು ತುಂಬಿದ್ದು; ತದನಂತರ ರಿಮೇಕ್, ಹೀಗೆ ಏರುಪೇರಿನ ಹಾದಿಯಲ್ಲಿ ಸಾಗುತ್ತಿರುವಾಗ ಕಾಸರವಳ್ಳಿಯಂತವರು ಆನೆ ನಡೆದದ್ದೇ ದಾರಿ ಎಂಬಂತೆ ತನ್ನದೇ ಹಾದಿ ಸೃಷ್ಟಿಸಿಕೊಂಡು ಅದರ ಪ್ರತೀ ಮೈಲುಗಲ್ಲಿಗೂ ಹಾದಿಯನ್ನು ಉತ್ತಮೋತ್ತಮ ಮಾಡಿ ನಮ್ಮ ಚಿತ್ರ ವೀಕ್ಷಣೆಯೆಂಬ ಪ್ರಯಾಣವನ್ನು ಸುಗಮ ಮಾಡಿಕೊಡುತಿದ್ದಾರೆ, ನಮ್ಮನ್ನು ಸಾರ್ಥಕ್ಯದ-ಆನಂದದ ಗಮ್ಯಕ್ಕೆ ತಲುಪಿಸುತಿದ್ದಾರೆ, ನಾನಂತೂ ಅವರ 'ನಾಯಿ ನೆರಳು' ನೋಡಲು; ಮುಂದಿನ ಗಮ್ಯತಲುಪಲು ಕಾದಿದ್ದೇನೆ.

'ಹಸೀನಾ' ಒಬ್ಬ ಮುಸ್ಲಿಂ ಹೆಣ್ಣುಮಗಳ ಕಣ್ಣೀರಿನ ಕತೆ. ಗರ್ಭದಲ್ಲಿರುವ ನಾಲ್ಕನೆಯ ಮಗುವೂ ಹೆಣ್ಣೆಂದು ಗೊತ್ತಾದಾಗ ಅವಳನ್ನು ತ್ಯಜಿಸಿಬಿಡುವ ಅವಳ ಆಟೋ ಚಾಲಕ ಗಂಡ; ಇವಳ ದುಡಿಮೆಗೆ ದಾರಿತೋರಿಕೊಡುವ ಮತ್ತು ಅದಕ್ಕೆ ಒಂದು ಅರ್ಥ ಒದಗಿಸಿ ಕೊಡುವ ಅವಳ ಕುರುಡಿ ಮಗಳು; ನ್ಯಾಯ ವಿಚಾರಣೆಗಾಗಿ ಇವಳು ಕೊಟ್ಟ ಕೊಟ್ಟ ಅರ್ಜಿಗಳನೆಲ್ಲ ಲೆಕ್ಕಕ್ಕೇ ಇಟ್ಟುಕೊಳ್ಳದ ಮಸೀದಿಯ ಮುಖ್ಯಸ್ಥ-ಆತನ ಮನೆಯಲ್ಲಿ ಮಕ್ಕಳನ್ನು ಹೆತ್ತೂ ಹೆತ್ತೂ ಸುಸ್ತಾದ ಆತನ ಹೆಂಡತಿ; ಮಸೀದಿಯೊಳಗಿನ ಒಳಜಗಳ, ರಾಜಕೀಯಗಳು; ಇವಳಿಗೆ ನ್ಯಾಯ ಒದಗಿಸಿಕೊಡಲಾಗದ ಮಸೀದಿಯ ಧಾರ್ಮಿಕ ಮುಖ್ಯಸ್ಥರು. ಕೊನೆಗೆ ಎಲ್ಲವೂ ಕೊನೆಯೇ ಇಲ್ಲದ ಗಮ್ಯವನ್ನು ಸೇರುತ್ತವೆ, ಥೇಟ್ 'ದ್ವೀಪ'ದ ಹಾಗೆ! ಅಲ್ಲಿ ಮಳೆಗಳ ವಿವರಣೆ ಕೊಡುವ ಹಾಗೇ ಇಲ್ಲೂ ಇಲ್ಲೂ ಪ್ಲೈಕಾರ್ಡ್‌ಗಳು ಮುಸ್ಲಿಂ ಪ್ರಾರ್ಥನೆಗಳ ವಿವರಣೆಕೊಡುತ್ತವೆ. ಅಲ್ಲೂ ಹೆಣ್ಣು, ಇಲ್ಲೂ ಹೆಣ್ಣು. ಎರಡರಲ್ಲೂ ಅವರವರ ಕನಸು, ದುಃಖ ದುಮ್ಮಾನಗಳು, ಮೌನವಾದ ಆಕ್ರೋಶ, ಸಮಸ್ಯೆಯನ್ನು ನೋಡುವ ಪರಿ, ಕೊನೆಗೆ ಒಪ್ಪಲಾರದನ್ನು ಒಪ್ಪಿಕೊಳ್ಳಬೇಕಾದ ಪರಿಸ್ಥಿತಿ, ಎಲ್ಲವೂ ದ್ವೀಪವೇ. ಆದರೆ ದ್ವೀಪ ಕೊನೆಗೆ ಏಕವ್ಯಕ್ತಿ ಸಮಷ್ಟಿಯ ಕತೆಯಾಗಿಬಿಡುತ್ತದೆ, 'ಹಸೀನಾ' ಸಮಾಜಮುಖಿಯಾಗುತ್ತದೆ, ಹಸೀನಾಳ ಪಟ್ಟ ಪಾಡು, ಅವಳು ಕನಸಿದ್ದ ಕನಸು ವ್ಯರ್ಥವಾದರೂ ಆಕೆ ಎಲ್ಲ ಹೋರಾಟಗಳಿಂದ ಗಟ್ಟಿಯಾಗುತ್ತಾಳೆ, ಅವಳ ಹೋರಾಟ ಸುತ್ತಲಿನ ಸಮಾಜವನ್ನು ಬದಲಾಯಿಸುವುದರಲ್ಲಿ ಸಹಕಾರಿಯಾಗುತ್ತದೆ. ಇದು ನಿಜವಾಗಿಯೂ ರಾಷ್ಟ್ರಪ್ರಶಸ್ತಿಗೆ ಅತ್ಯಂತ ಪ್ರಶಸ್ತವಾದ ಕಥಾಹಂದರ.

ತಾರಾರವರದ್ದು ನಿಜವಾಗಿಯೂ ರಾಷ್ಟ್ರ ಪ್ರಶಸ್ತಿವಿಜೇತ ಪಾತ್ರವೇ ಸರಿ. 'ದ್ವೀಪ'ದಲ್ಲಾದರೋ ಸೌಂದರ್ಯರಿಗೆ ಇದಿರಾಗಿ ಅವಿನಾಶ್ ಇದ್ದರು, ಇಲ್ಲಿ ಹಸೀನಾ ಒಬ್ಬಳೇ. ಉಳಿದವರೆಲ್ಲ ನೆಪಮಾತ್ರ. ಆಕೆಯ ಕಾಡಿಗೆಯ ಕಣು-ಕಣ್ಣೀರು; ಊದುಬತ್ತಿ ಹೊಸೆದು ಕಪ್ಪಾದ ಕೈಗಳು; ತುಂಬುಕೊರಳಿನ ಕುಪ್ಪಸ-ಕರಿಮಣಿ; ಅವಡುಗಚ್ಚಿ ಆಕೆ ಎಲ್ಲೆಡೆಗೆ ಆರು ತಿಂಗಳ ಬಸಿರ ಹೊತ್ತು ಉಳಿದ ಮೂವರು ಹೆಣ್ಣುಮಕ್ಕಳನ್ನು ಎಳೆದುಕೊಂಡು ಬಿರ್ರನೆ ತಿರುಗುವ ಪರಿ; ಕ್ಷಣದಲ್ಲಿ ನಕ್ಕು ಕ್ಷಣದಲ್ಲಿ ದುಗುಡದಿಂದ ಕಣ್ಣೀರಾಗುವ ಪರಿ; ಎಲ್ಲವೂ ಅನನ್ಯ.

ಅದಕ್ಕಾಗಿಯೇ ಇದು ಸಂವೇದನೆಯ ಪ್ರತಿರೂಪ ಅಂದದ್ದು. ಪ್ರಶಸ್ತಿವಿಜೇತ ಚಿತ್ರವಾದರೂ ಬೇರೆ 'ಪ್ರಶಸ್ತಿವಿಜೇತ ನಿರ್ದೇಶಕರಂತೆ ಕಾಸರವಳ್ಳಿಯವರು ಕತೆಯನ್ನು, 'ಎಫೆಕ್ಟ್'ಗೋಸ್ಕರ ಶಾಟ್‌ಗಳನ್ನು-ಕೊಯ್ಯುವ ಸಂಗೀತದೊಡನೆ ಎಳೆಯುವುದಿಲ್ಲ. ಸಣ್ಣ ಸಣ್ಣ ಸಂದರ್ಭಗಳನ್ನು ಸೃಷ್ಟಿಸಿ ಕತೆಯನ್ನು ಮುಂದಕ್ಕೊಯ್ಯುತ್ತಾರೆ, ನಗಿಸುತ್ತಾರೆ, ಹೃದಯವನ್ನು ಆರ್ದ್ರಗೊಳಿಸುತ್ತಾರೆ, ಕತೆಯಲ್ಲಿ ಬರುವ ಪಾತ್ರಗಳ ಪರಿಚಯ ಮಾಡಿಕೊಡುತ್ತಾರೆ, ಅವುಗಳ ಹಿನ್ನಲೆ, ಸಾಮಾಜಿಕ ರೀತಿ ರಿವಾಜುಗಳನ್ನು (ಸಂಬಂಧವೇ ಇಲ್ಲದೇ ಹಾಡುಗಳನ್ನು, ವಿವರಗಳನ್ನು ಮಧ್ಯೆ ಮಧ್ಯೆ ತುರುಕುವ ನಿರ್ದೇಶಕರಂತಲ್ಲದೇ) ಕಲಿಸಿಕೊಡುತ್ತಾರೆ, ತನ್ಮೂಲಕ ನಮಗೆ ಸಂವೇದನೆಯ ಅರ್ಥ ಕಲಿಸಿಕೊಡುತ್ತಾರೆ, ಮತ್ತು ನಮ್ಮನ್ನು ಸಂವೇದನಾಶೀಲರನ್ನಾಗಿ ಮಾಡಲು ಮತ್ತೊಂದು ಸಾರ್ಥಕ ಪ್ರಯತ್ನಮಾಡುತ್ತಾರೆ. ಅದಕ್ಕಾಗಿ ಅವರಿಗೊಂದು ದೊಡ್ಡ ಥ್ಯಾಂಕ್ಸ್!

ಕೊನೆ ಗುಟುಕು

- ಚಿತ್ರಮಂದಿರಕ್ಕೆ ರಶ್ಯಸ್ ನೋಡಲು ಬಂದಿದ್ದ 'ತಾರಾ' ಳನ್ನು ನೋಡಿ ನನ್ನಮ್ಮ 'ಎಷ್ಟು ದಪ್ಪಗಿದ್ದಾಳೆ, ಪಿಚ್ಚರಲ್ಲಿ ಅಷ್ಟೊಂದು ಚೆನ್ನಾಗಿಕಾಣಿಸ್ತಾಳೆ? ಅವಳ ಮೈಬಣ್ಣನೂ ನನಗಿಂತೇನೂ ಬೆಳ್ಳಗಿಲ್ಲ ಬಿಡು, ಎಲ್ಲ ಬಳಿದುಕೊಳ್ಳೋ ಬಣ್ಣದ ಮಹಿಮೆ' ಅಂದಳು
- ದ್ವೀಪದಂತೆಯೇ ಹಸೀನಾದಲ್ಲೂ ಅತ್ಯುತ್ತಮವಾದ ಸಂಗೀತವಿದೆ, ಹಾಡುಗಳಿಲ್ಲದಿದ್ದರೂ ಕರ್ಣಾನಂದಕರವಾದ, ಮನೋಹರವಾದ ಈ ಎರಡು ಚಿತ್ರಗಳ ಹಿನ್ನಲೆ ಸಂಗೀತದ ಸಂಕಲಿತ ಆಡಿಯೋ ಕ್ಯಾಸೆಟ್/ಸಿಡಿಗಳೇಕೆ ಬರಲಿಲ್ಲ?